# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಆಯುಕ್ತರು (ಆಸ್ತಿಗಳು) ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ವೃತ್ತ, ಬೆಂಗಳೂರು.**

---

ಸಂಖ್ಯೆ:ಎಲ್ಎಕ್ಯೂ/ಸಿಆರ್/57/09–10 ದಿನಾಂಕ: 21–04–2010

## ಕಛೇರಿ ಆದೇಶ

**ವಿಷಯ: ವ್ಯವಸಾಯದ ಜಮೀನುಗಳಿಗೆ ಟಿ.ಡಿ.ಆರ್. ನೀಡುವ ಬಗ್ಗೆ.**

**ಉಲ್ಲೇಖ:** 1) ಈ ಕಛೇರಿಯ ಕಛೇರಿ ಆದೇಶದ ಸಂಖ್ಯೆ: ಉ.ಆ.(ಭೂ)/ ಪಿಎಸ್ಆರ್(1)/ಪಿಆರ್/03/09–10 ದಿನಾಂಕ: 05–10–2009 ಮತ್ತು 09–11–2009.

2) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಉ.ಆ.(ಭೂಸ್ವಾ)/ ಪಿಎಸ್ಆರ್(1)/ ಪಿಆರ್/03/09–10.

3) ಸರ್ಕಾರದ ಅಧಿಸೂಚನೆ ಸಂಖ್ಯೆ: UDD/ 154/ BEM/ RUPRA/ 2004, dated-18-01-2005

4) ಮಾನ್ಯ ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ನಡೆಸಿದ ಸಭೆಯ ಟಿಪ್ಪಣಿ ಸಂಖ್ಯೆ: 698:ವ.ವಾ.ಮಾ&ಜೈ.ಬೆಜಮಂ.ಆ.ಕಾ.2010, ದಿನಾಂಕ:12–01–2010 ರ ನಿರ್ಣಯ.

* * * * * * *

**ಪ್ರಸ್ತಾವನೆ:–**

ಸೆಕ್ಷನ್–14(ಬಿ), ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆ ಪ್ರಕಾರ ಯಾವುದೇ ರೀತಿಯ ನಗರ ವ್ಯಾಪ್ತಿಯ ಜಮೀನುಗಳಿಗೆ/ನಿವೇಶನಗಳಿಗೆ ಟಿ.ಡಿ.ಆರ್. ಹಕ್ಕುಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಆರ್ಟಿರಿಯಲ್ ಮತ್ತು ಸಬ್ಆರ್ಟಿರಿಯಲ್ ರಸ್ತೆಗಳನ್ನು ಅಗಲೀಕರಣ ಮಾಡಲು ಉದ್ದೇಶಿಸಲಾಗಿದೆ. ಈಗಾಗಲೇ ಕೆಲವು ವಲಯಗಳಲ್ಲಿ ಇಂತಹ ರಸ್ತೆಗಳನ್ನು ಅಗಲೀಕರಣ ಮಾಡಲಾಗಿದ್ದು, ಡಿ.ಆರ್.ಸಿ ನೀಡಲು ಬಹಳಷ್ಟು ಪ್ರಕರಣಗಳು ಬಾಕಿ ಇರುತ್ತದೆ. ವ್ಯವಸಾಯದ ಜಮೀನುಗಳು, ಬಿಬಿಎಂಪಿ ಖಾತೆ ಆಗದೇ ಇರುವ ನಿವೇಶನಗಳು ಮತ್ತು ಹಸಿರು ವಲಯದಲ್ಲಿರುವ ಜಮೀನುಗಳಲ್ಲಿಯೂ ಸಹ ರಸ್ತೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ ಹಾಗೂ ಮಾಡಬೇಕಾಗಿರುತ್ತದೆ. ಈ ಬಗ್ಗೆ, ಸರ್ಕಾರಕ್ಕೆ ಈಗಾಗಲೇ ನಿಯಮಗಳಲ್ಲಿರುವ ತೊಡಕುಗಳನ್ನು ಹಾಗೂ ಸಮಸ್ಯೆಗಳನ್ನು ಉಲ್ಲೇಖಿಸಿ ಸರ್ಕಾರಕ್ಕೆ ಪತ್ರವನ್ನೂ ಸಹ ಬರೆಯಲಾಗಿದೆ.

..........2

ಈ ಬಗ್ಗೆ ಸರ್ಕಾರದ ಹಂತದಲ್ಲಿ ಮಾನ್ಯ ಬೆಂಗಳೂರು ಉತ್ತರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:17-2-2009 ರಂದು ನಡೆದ ಸಭೆಯಲ್ಲಿ ಟಿ.ಡಿ.ಆರ್. ಯೋಜನೆಯ ಅನುಷ್ಠಾನದಲ್ಲಿ ಇರುವಂತಹ ಅನೇಕ ಸಮಸ್ಯೆಗಳನ್ನು ನಿವಾರಣೆ ಮಾಡುವ ಬಗ್ಗೆ ಸಹ ಚರ್ಚಿಸಿ ಸುಮಾರು 9 ವಿಷಯಗಳ ಬಗ್ಗೆ ತೀರ್ಮಾನವನ್ನು ಸಹ ಕೈಗೊಳ್ಳಲಾಗಿದೆ. ಆದರೆ, ಇದನ್ನು ಅನುಷ್ಠಾನಗೊಳಿಸುವ ಬಗ್ಗೆ ಅಧಿಸೂಚನೆ ಅಥವಾ ತಿದ್ದುಪಡಿ ರೂಪದಲ್ಲಿ ಸರ್ಕಾರದಿಂದ ಆದೇಶ ಹೊರಡಿಸಲು ಬಾಕಿ ಇರುತ್ತದೆ. ಏತನ್ಮಧ್ಯೆ ರಸ್ತೆ ಅಗಲೀಕರಣ ಕಾಮಗಾರಿಗಳನ್ನು ಯಾವುದೇ ರೀತಿಯ ತೊಂದರೆಯಿಲ್ಲದೆ ಹಾಗೂ ಅಡಚಣೆಯಿಲ್ಲದೆ ಅನುಷ್ಠಾನಗೊಳಿಸಬೇಕಾಗಿದೆ. ಆದ್ದರಿಂದ, ಸರ್ಕಾರದ ಸ್ಪಷ್ಟೀಕರಣ ಅಥವಾ ಆದೇಶಗಳನ್ನು ನಿರೀಕ್ಷಿಸಿ ರಸ್ತೆ ಅಗಲೀಕರಣ ಕಾಮಗಾರಿಗಳನ್ನು ಸಮಯೋಚಿತವಾಗಿ ಹಾಗೂ ಯಾವುದೇ ರೀತಿಯ ವಿಳಂಬವಿಲ್ಲದಂತೆ ಅನುಷ್ಠಾನ ಮಾಡುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ, ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಸೆಕ್ಷನ್-14(ಬಿ), ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆ ಅನುಸಾರ ಯಾವುದೇ ಜಮೀನು ನಗರಪಾಲಿಕೆ/ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವ ನಿವೇಶನ/ಜಮೀನುಗಳಿಗೆ ಟಿ.ಡಿ.ಆರ್. ಹಕ್ಕುಗಳನ್ನು ನೀಡಲು ಅವಕಾಶವಿದ್ದು, ವ್ಯವಸಾಯದ ಜಮೀನು, ಖಾತೆ ಇಲ್ಲದೇ ಇರುವ ನಿವೇಶನ, ಹಸಿರು ವಲಯದಲ್ಲಿರುವ ಜಮೀನು ಅಥವಾ ನಿವೇಶನ ಇತ್ಯಾದಿ ತರಹೆಯ ನಿವೇಶನ/ಜಮೀನುಗಳನ್ನು ಬಿಬಿಎಂಪಿಯು ರಸ್ತೆ ಅಗಲೀರಣ, ಮಳೆ ನೀರಿನ ಚರಂಡಿ, ಮೇಲು ಸೇತುವೆ, ಕೆಳ ಸೇತುವೆ, ಮೋರಿ ಇತ್ಯಾದಿ ನಾಗರೀಕ ಸೌಲಭ್ಯಗಳನ್ನು ನೀಡಲು ಮಾತ್ರವೇ ಉಪಯೋಗಿಸಿಕೊಳ್ಳುತ್ತಿರುವುದರಿಂದ ಇಂತಹ ಜಮೀನುಗಳಿಗೂ ಸಹ ಸೆಕ್ಷನ್-14(ಬಿ), ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆಯಲ್ಲಿರುವ ಅವಕಾಶಗಳನ್ನು ಉಪಯೋಗಿಸಿಕೊಂಡು ಟಿ.ಡಿ.ಆರ್ (TDR) ಹಕ್ಕುಗಳನ್ನು ನೀಡಲು ಈ ಮೂಲಕ ಆದೇಶಿಸಿದೆ. ಬಿಬಿಎಂಪಿ ವ್ಯಾಪ್ತಿಯ ಎಲ್ಲಾ ವಲಯಗಳ ಅಪರ/ಜಂಟಿ/ಉಪ ಆಯುಕ್ತರು ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಈಗಾಗಲೇ ಇಂತಹ ಜಮೀನುಗಳನ್ನು ಉಪಯೋಗಿಸಿಕೊಂಡಿದಲ್ಲಿ ಅಂತಹ ಎಲ್ಲಾ ಜಮೀನು/ನಿವೇಶನಗಳಿಗೆ ಟಿ.ಡಿ.ಆರ್ (TDR) ಹಕ್ಕುಗಳನ್ನು ಸೆಕ್ಷನ್-14(ಬಿ), ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆಯ ಪ್ರಕಾರ ನೀಡತಕ್ಕದ್ದು. ಇದನ್ನು ಉಪಯೋಗಿಸುವಾಗ ಟೇಬಲ್ ನಂ.25 ಆರ್.ಎಂ.ಪಿ 2015 ಇದರಲ್ಲಿರುವ ಅನುಪಾತವನ್ನು ಯಥಾವತ್ತಾಗಿ ಪಾಲಿಸತಕ್ಕದ್ದು.

ಸಹಿ

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ